ಬೆಳಗಾಂ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ.

204 (1944) : ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲ್‌ಹೊಂಗಲ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಳಗಾಂ ಜಿಲ್ಲೆಯಲ್ಲಿ ರೇಷ್ಮೆಯನ್ನು ಬೆಳೆಯಲು ಹೆಚ್ಚಿನ ಅವಕಾಶ ಮತ್ತು ಹವಾಗುಣ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ರೇಷ್ಮೆ ಬೆಳೆಯನ್ನು ಇನ್ನೂ ಹೆಚ್ಚಿಗೆ ಬೆಳೆಯಲು ಈ ಜಿಲ್ಲೆಯಲ್ಲಿ ಸರ್ಕಾರ ಯಾವುದಾದರೂ ಕ್ರಮ ಕೈಗೊಳ್ಳುವುದೇ ಹಾಗೂ ಸೌಲಭ್ಯಗಳನ್ನು ಒದಗಿಸುವುದೇ;

(ಇ) ಬೆಳಗಾಂದಲ್ಲಿ ಸರ್ಕಾರವು ಖರೀದಿ ಮಾಡುವಂತೆ ಬೈಲಹೊಂಗಲದಲ್ಲಿಯೂ ಸಹಾ ಸರ್ಕಾರದವರು ರೇಷ್ಮೆಯನ್ನು ಖರೀದಿ ಮಾಡಲು ಕ್ರಮ ಕೈಗೊಳ್ಳುವರೇ;

(ಈ) ಸರ್ಕಾರದವರು ಖರೀದಿ ಮಾಡುವ ದರಕ್ಕಿಂತ ಖಾಸಗಿಯವರು ಹೆಚ್ಚಿಗೆ ದರ ನೀಡಿ ಖರೀದಿಸುತ್ತಿರುವ ಸಂಗತಿ ನಿಜವೇ; ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಹೌದು.

(ಆ) ಹೌದು. ಬೆಳಗಾಂ ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸಲು ಇಲಾಖೆಯು ಈ ಕೆಳಕಂಡ ಕಾರ್ಯಕ್ರಮಗಳನ್ನು 1999-2000ನೇ ಸಾಲಿನಲ್ಲಿ ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ.

I ಜಿಲ್ಲಾವಲಯ ಕಾರ್ಯಕ್ರಮಗಳು:

ಈ ಯೋಜನೆಯಡಿ ರೇಷ್ಮೆ ಕೃಷಿ ಕ್ಷೇತ್ರಗಳ ನಿರ್ವಹಣೆ, ಸಲಹಾ ಸೇವೆಗಳು, ಪ್ರಚಾರ, ಪ್ರಾತ್ಯಕ್ಷತೆ, ದೃಶ್ಯ ಮತ್ತು ಶ್ರವಣ, ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ, ತರಬೇತಿ ನೀಡುವುದು, ದ್ರಿತಳಿಗೂಡಿಗೆ ಪ್ರೋತ್ಸಾಹ ಧನ, ರೇಷ್ಮೆ ಹುಳು ಸಾಕುವ ಮನೆ ಹಾಗೂ ರೋಲಿಂಗ್ ಶೆಡ್ ನಿರ್ಮಾಣಕ್ಕೆ ಸಹಾಯಧನವನ್ನು ನೀಡುವುದು, ರೋಗ ನಿಯಂತ್ರಣ ಕಾರ್ಯಕ್ರಮಗಳು, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಕಾರ್ಯಕ್ರಮಗಳು ಸೇರಿದಂತೆ ಒಟ್ಟು ರೂ. 24.80 ಲಕ್ಷಗಳ ಅನುದಾನವಿದ್ದು ಈ ಎಲ್ಲಾ ಕಾರ್ಯಕ್ರಮಗಳು ಪ್ರಗತಿಯಲ್ಲಿವೆ.

II ರಾಜ್ಯವಲಯ ಕಾರ್ಯಕ್ರಮಗಳು:

ಈ ಯೋಜನೆಯಡಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರು ನಿರ್ಮಿಸುವ ಪ್ರತ್ಯೇಕ ಹುಳು ಸಾಕುವ ಮನೆಗೆ ಸಹಾಯಧನ ನೀಡಲು ಒಟ್ಟು ರೂ. 1.04 ಲಕ್ಷಗಳ ಅನುದಾನವಿದ್ದು ಕಾರ್ಯಕ್ರಮಗಳು ಪ್ರಗತಿಯಲ್ಲಿವೆ.

(ಇ) ಬೆಳಗಾಂ ಜಿಲ್ಲೆಯ ಬೆಳಗಾಂ, ಖಾನಾಪುರ, ಬೈಲಹೊಂಗಲ, ಸವದತ್ತಿ ಮತ್ತು ಹುಕ್ಕೇರಿ ತಾಲ್ಲೂಕುಗಳು ದ್ವಿತಳಿ ಬಿತ್ತನೆ ಪ್ರದೇಶಗಳಾಗಿದ್ದು ಇಲ್ಲಿ ಉತ್ಪಾದಿಸುವ ರೇಷ್ಮೆ ಗೂಡುಗಳನ್ನು ಪ್ರಸ್ತುತ ಬೆಳಗಾಂ ದ್ವಿತಳಿ ಗೂಡಿನ ಮಾರುಕಟ್ಟೆಯಲ್ಲಿ ವಿಲೇವಾರಿ ಮಾಡಲು ವ್ಯವಸ್ಥೆ ಮಾಡಿದ್ದು ಬೈಲಹೊಂಗಲದಲ್ಲಿ ಹೊಸದಾಗಿ ಮಾರುಕಟ್ಟೆ ಸ್ಥಾಪಿಸಿ ಖರೀದಿಸುವ ಅಗತ್ಯತೆ ಸದ್ಯದ ಮಟ್ಟಿಗೆ ಕಂಡುಬರುತ್ತಿಲ್ಲ.

(ಈ) ಇಲ್ಲ. ರೈತರು ಉತ್ಪಾದಿಸಿದ ರೇಷ್ಮೆ ಬಿತ್ತನೆ ಗೂಡಿನ ಗುಣಮಟ್ಟವನ್ನು ಆಧರಿಸಿ ಇಲಾಖೆ ನಿಗದಿಪಡಿಸಿದ ಸೂತ್ರದ ಪ್ರಕಾರ ಸರ್ಕಾರವು ಬಿತ್ತನೆ ಗೂಡಿಗೆ ದರವನ್ನು ನಿಗದಿ ಪಡಿಸುತ್ತಿದೆ. ಆದ್ದರಿಂದ ಖಾಸಗಿ ಮೊಟ್ಟೆ ತಯಾರಕರು ಹೆಚ್ಚಿನ ದರ ನೀಡುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ : ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ರೇಷ್ಮೆಯನ್ನು ಬೆಳೆಯಲು ಹೆಚ್ಚಿನ ಅವಕಾಶ ಮತ್ತು ಹವಾಗುಣ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಹಾಗಾದರೆ ವರ್ಷದಿಂದ ವರ್ಷಕ್ಕೆ ರೇಷ್ಮೆ ಬೆಳೆಗಾರರ ಸಂಖ್ಯೆ ಯಾವ ಕಾರಣಕ್ಕಾಗಿ ಕಡಿಮೆಯಾಗುತ್ತಿದೆ? 1998-99 ರಲ್ಲಿ ಎಷ್ಟು ಎಕರೆಯಲ್ಲಿ ರೇಷ್ಮೆಯನ್ನು ಬೆಳೆದಿದ್ದರು? 1999-2000ನೇ ಇಸವಿಯಲ್ಲಿ ಎಷ್ಟು ಎಕರೆಯಲ್ಲಿ ರೇಷ್ಮೆಯನ್ನು ಬೆಳೆದಿದ್ದಾರೆ? ಅಲ್ಲಿಯ ಅಧಿಕಾರಿಗಳು ರೈತರೊಂದಿಗೆ ಸರಿಯಾಗಿ ಸಹಕರಿಸದೇ ಇರುವುದರಿಂದ ರೇಷ್ಮೆ ಬೆಳೆಗಾರರ ಸಂಖ್ಯೆ ಕಡಿಮೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ತಮ್ಮ ಗಮನಕ್ಕೆ ಬಂದಿದ್ದರೆ, ಅದರ ಬಗ್ಗೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಸರ್ಕಾರದವರು ಖರೀದಿ ಮಾಡುವ ದರಕ್ಕಿಂತ ಖಾಸಗಿಯವರು ಹೆಚ್ಚಿನ ದರದಲ್ಲಿ ಖರೀದಿ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೀರಿ. ಗೋಕಾಕ್‌ದಲ್ಲಿ ಖಾಸಗಿಯವರು ತಮ್ಮ ಸರ್ಕಾರದ ದರಕ್ಕಿಂತ ಹೆಚ್ಚಿನ ದರ ಕೊಟ್ಟು ಖರೀದಿ ಮಾಡುತ್ತಿದ್ದಾರೆ. ತಮ್ಮ ಅಧಿಕಾರಿಗಳು ತಮಗೆ ಈ ರೀತಿಯ ತಪ್ಪು ಮಾಹಿತಿ ಕೊಟ್ಟರೆ ಇನ್ನು ಸಾರ್ವಜನಿಕರ ಪರಿಸ್ಥಿತಿ ಏನು?

ಶ್ರೀ ಎಂ ಮಹದೇವ (ರೇಷ್ಮೆ ಸಚಿವರು) : ಬೆಳಗಾಂನಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿ ಪಡಿಸಲು ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ ಫೆಬ್ರವರಿ 2000ದ ಅಂತ್ಯಕ್ಕೆ 540 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೇಸಾಯ ಇದ್ದು, 97 ಮೆಟ್ರಿಕ್ ಟನ್ ಗೂಡು ಉತ್ಪಾದನೆಯಾಗಿದೆ. 1997-98 ರಲ್ಲಿ 247 ಹೆಕ್ಟೇರ್ ಧಾರವಾಡದಲ್ಲಿ, 215 ಹೆಕ್ಟೇರ್ ಬೆಳಗಾಂನಲ್ಲಿ, 1998-99 ರಲ್ಲಿ 52 ಹೆಕ್ಟೇರ್ ಧಾರವಾಡದಲ್ಲಿ, 190 ಹೆಕ್ಟೇರ್ ಬೆಳಗಾಂನಲ್ಲಿ, 1999-2000 ರಲ್ಲಿ 31 ಹೆಕ್ಟೇರ್ ಧಾರವಾಡದಲ್ಲಿ, 127 ಹೆಕ್ಟೇರ್ ಬೆಳಗಾಂನಲ್ಲಿ ಬೆಳೆದಿದೆ. ಇದರಲ್ಲಿ ಏರಿಯಾ ಅಪ್‌ರೂಟೆಡ್ ಆಗಿರುವುದು 1997-98ನೇ ಸಾಲಿನಲ್ಲಿ 20 ಹೆಕ್ಟೇರ್ಸ್, ಧಾರವಾಡದಲ್ಲಿ, ಬೆಳಗಾಂನಲ್ಲಿ 132 ಹೆಕ್ಟೇರ್ಸ್. 1998-99 ರಲ್ಲಿ 20 ಹೆಕ್ಟೇರ್ಸ್, 1999-2000ನೇ ಇಸವಿಯಲ್ಲಿ 4 ಹೆಕ್ಟೇರ್ಸ್ ಧಾರವಾಡದಲ್ಲಿ, 90 ಹೆಕ್ಟೇರ್ಸ್ ಬೆಳಗಾಂನಲ್ಲಿ ಆಗಿದೆ. ಇದು ಕಕೂನ್ ಪ್ರೊಡಕ್ಷನ್‌ಗೆ ಅಷ್ಟೆ. 1997-98 ರಲ್ಲಿ ಸಿಬಿ 83 ಮೆಟ್ರಿಕ್ ಟನ್ ಧಾರವಾಡದಲ್ಲಿ, ಸಿಬಿ 211 ಮೆಟ್ರಿಕ್ ಟನ್ಸ್ ಬೆಳಗಾಂನಲ್ಲಿ, 1998-99ನೇ ಸಾಲಿನಲ್ಲಿ 14,549 ಮೆ. ಟನ್ಸ್ ಸಿಬಿ,

ಬಿವಿ 12.181 ಮೆ. ಟನ್ಸ್ ಧಾರವಾಡದಲ್ಲಿ. 105 ಮೆ. ಟನ್ಸ್ ಸಿಬಿ, 137.675 ಮೆ. ಟನ್ಸ್ ಬೆಳಗಾಂನಲ್ಲಿ ಆಗಿದೆ. ಬಿವಿ 9,836 ಮೆ. ಟನ್ಸ್ ಒಟ್ಟಿಗೆ 218 ಮೆ. ಟನ್ಸ್ ಬೆಳಗಾಂನಲ್ಲಿ ಆಗಿದೆ. 1999-2000ನೇ ಇಸವಿಯಲ್ಲಿ 12.664 ಮೆ. ಟನ್ಸ್ ಸಿಬಿ, ಬಿವಿ 12.294 ಮೆ. ಟನ್ಸ್ ಉತ್ಪತ್ತಿಯಾಗಿದೆ. ಬೆಳಗಾಂ ಜಿಲ್ಲೆಯಲ್ಲಿ 170 ಮೆ. ಟನ್ಸ್ ಮತ್ತು 170 ಮೆ. ಟನ್ಸ್ ಕಕೂನ್ ಉತ್ಪಾದನೆಯಾಗಿದೆ. ಇದು ಈಗ ಸರ್ಕಾರದ ಗಮನಕ್ಕೆ ಬಂದಿದೆ. ಆ ಏರಿಯಾ ಪ್ರತಿ ವರ್ಷ ಕಡಿಮೆಯಾಗುತ್ತಿರುವುದರಿಂದ ಸಿಬ್ಬಂದಿ ಎಕ್ಸ್‌ಟೆನ್‌ಷನ್ ಪ್ರೋಗ್ರಾಮ್‌ನ್ನು ನಾವು ಹಾಕಿಕೊಂಡು ಉತ್ಪಾದನೆ ಜಾಸ್ತಿ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಅಲ್ಲಿ ಏನು ಎಕ್ಸ್‌ಟೆನ್‌ಷನ್ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದರೆ, ರೇಷ್ಮೆ ಕೃಷಿ ಕ್ಷೇತ್ರ ನಿರ್ವಹಣೆ, ಸಲಹಾ ಸೇವೆಗಳ ಪ್ರಚಾರ, ಕ್ಷೇತ್ರ ಪ್ರಾತ್ಯಕ್ಷಿಕೆ, ದೃಶ್ಯ ಮತ್ತು ಶ್ರವಣ, ಮಹಿಳಾ ಪ್ರಾತ್ಯಕ್ಷಿಕೆ, ಕ್ಷೇತ್ರ ತರಬೇತಿ ಕೇಂದ್ರ, ದ್ವಿ-ತಳಿ ಗೂಡಿಗೆ ಪ್ರೋತ್ಸಾಹಧನ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮ. ರಾಜ್ಯ ವಲಯ ಕಾರ್ಯಕ್ರಮಗಳು, ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ, ಹೀಗೆ ನಾವು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಬೆಲೆಯಲ್ಲಿ ತಾರತಮ್ಯ ಇದೆ ಎಂದು ಹೇಳಿದ್ದಾರೆ. ದ್ವಿತಳಿ ಬಿತ್ತನೆ ಗೂಡುಗಳಿಗೆ ಇಲ್ಲಿಯೂ ದರ ನಿಗದಿಪಡಿಸಿದ್ದು, ರಾಜ್ಯಾದ್ಯಂತ ಒಂದೇ ತರವಾದ ದರ ಚಾಲ್ತಿಯಲ್ಲಿರುತ್ತದೆ. ಸರ್ಕಾರಿ ಬಿತ್ತನೆ ಕೋಠಿ, ಖಾಸಗಿ ಬಿತ್ತನೆ ಕೋಠಿ ಮತ್ತು ಕೇಂದ್ರಿಯ ರೇಷ್ಮೆ ಮಂಡಳಿಯವರು ದ್ವಿ-ತಳಿ ಬಿತ್ತನೆ ಗೂಡುಗಳನ್ನು ಖರೀದಿಸುತ್ತಿದ್ದಾರೆ. ಇಲಾಖೆ ನಿಗದಿಪಡಿಸಿದ ದರದಲ್ಲಿ ಖರೀದಿಸಬೇಕಾಗುತ್ತದೆ. ಹಾಲಿ ಚಾಲ್ತಿಯಲ್ಲಿರುವ ಬಿತ್ತನೆ ಗೂಡಿನ ದರಗಳ ವಿವರ ಈ ರೀತಿ ಇದೆ. ಯಾವುದು ಕಡಿಮೆ ತೂಕ ಬರುತ್ತದೆ ಅದಕ್ಕೆ ಜಾಸ್ತಿ ಬೆಲೆ ಕೊಟ್ಟು ತೆಗೆದುಕೊಳ್ಳುತ್ತೇವೆ. ಯಾವುದು ಜಾಸ್ತಿ ಬರುತ್ತದೆ ಅದಕ್ಕೆ ಕಡಿಮೆಯಾಗುತ್ತದೆ. ಅದರ ಪ್ರಕಾರ ಪ್ರತಿ ಕೇಜಿಗೆ ಉತ್ತಮ ಗೂಡುಗಳು 650 ಕೆಜಿಗಿಂತ ಕಡಿಮೆ ಇದ್ದರೆ 250 ರೂಪಾಯಿಗಳ ದರವನ್ನು ನಿಗದಿ ಮಾಡುತ್ತೇವೆ. 651 ಕೆಜಿಯಿಂದ 660 ಕೆಜಿಗೆ 245 ರೂಪಾಯಿಗಳ ದರವನ್ನು ನಿಗದಿ ಮಾಡುತ್ತೇವೆ. 670 ಕೆಜಿ ಇದ್ದರೆ 235 ರೂಪಾಯಿಗಳ ದರವನ್ನು ಮಾಡುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಇಷ್ಟು ಹೇಳುವ ಅವಶ್ಯಕತೆ ಇಲ್ಲ. ಅವರು ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕರೆ ಸಾಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನೀವು ನಮಗೆ ಸ್ಪೆಸಿಫಿಕ್ಕಾಗಿ ಪ್ರಶ್ನೆ ಕೇಳಿ ಎಂದು ಹೇಳುತ್ತೀರಿ. ಹಾಗೆ ಅವರಿಗೆ ಸ್ಪೆಸಿಫಿಕ್ಕಾಗಿ ಉತ್ತರ ಹೇಳಿ ಎಂದು ಹೇಳಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಬರಿ ಇನ್‌ಫರ್ಮೇಷನ್ ಕೊಡಬೇಕು. ಅವರು ಬೇರೆ ಪ್ರಶ್ನೆಗಳೂ ಇವೆ, to elicit the information ಪ್ರಶ್ನೆಗಳನ್ನು ಕೇಳುತ್ತಾರೆ. ಅವರು ಸಂಕ್ಷಿಪ್ತವಾಗಿ ಕೇಳುತ್ತಾರೆ, ನೀವೂ ಸಂಕ್ಷಿಪ್ತವಾಗಿ ಹೇಳಿದರೆ ದೀರ್ಘವಾಗಿ ಹೋಗುವುದಿಲ್ಲ. ನೀವು ದೀರ್ಘವಾಗಿ ಐದಾರು ಪೇಜ್ 10 ನಿಮಿಷ ಓದಿಕೊಂಡು ಕೂತರೆ ಪ್ರಶ್ನೋತ್ತರ ವೇಳೆ ಹೇಗೆ ನಡೆಸುವುದು?

ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ : ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಅವರು ಗಮನಿಸಲಿಲ್ಲವೆಂದು ಕಾಣುತ್ತದೆ. 1999-2000ನೇ ಇಸವಿಯಲ್ಲಿ ಆ ಜಿಲ್ಲೆಯಲ್ಲಿ ರೇಷ್ಮೆ

ಬೆಳೆಗಾರರ ಸಂಖ್ಯೆ ಕಡಿಮೆಯಾಗಿದ್ದು ತಮ್ಮ ಗಮನಕ್ಕೆ ಬಂದಿದೆಯಾ ಎಂದು ಕೇಳಿದ್ದೆ ಬಂದಿದೆ ಎಂದು ಹೇಳಿದಿರಿ. ರೇಷ್ಮೆ ಬೆಳೆಗಾರರ ಸಂಖ್ಯೆ ಏಕೆ ಕಡಿಮೆಯಾಗುತ್ತಿದೆ ಎಂದು ಕೇಳಿದೆ, ಅದಕ್ಕೆ ಸ್ಪಷ್ಟವಾಗಿ ಉತ್ತರ ಕೊಟ್ಟಿಲ್ಲ.

ಶ್ರೀ ಎಂ. ಮಹದೇವ : ಸರ್ಕಾರದ ಗಮನಕ್ಕೆ ಬಂದಿದೆ, ಅದನ್ನು ಇಂಪ್ರೂವ್ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ.

ಶ್ರೀ ಎಸ್. ಎಸ್. ಪಾಟೀಲ್ : ತಾವು ಕಡಿಮೆಯಾಗಿದೆ, ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದಿರಿ, ಯಾವ ದೃಷ್ಟಿಯಿಂದ ಕಡಿಮೆಯಾಗಿದೆ ಎಂದು ಹೇಳಿದರು ಅದನ್ನು ಕಂಡುಹಿಡಿದಿರಾ? ಅದನ್ನು ಅವರು ಕೇಳುತ್ತಿದ್ದಾರೆ.

ಶ್ರೀ ಎಂ ಮಹದೇವ : ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಇಲ್ಲ ಎನ್ನುವುದು ಒಂದು ಎರಡನೆಯದು ಅದನ್ನು ತೆಗೆದುಕೊಂಡು ಹೊರಗಡೆ ದೂರದ ಪ್ರದೇಶದಲ್ಲಿ ಹೋಗಬೇಕಾದ ಸಮಸ್ಯೆ ಇದೆ. ಅಲ್ಲಿ ಸರಿಯಾದ ತರಬೇತಿ ಇಲ್ಲದೆ ಉತ್ಪಾದನೆ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಇದರಿಂದ ನಷ್ಟವಾಗುತ್ತಿದೆ ಎಂದು ರೈತರ ಗಮನಕ್ಕೆ ಬಂದಿರುವುದರಿಂದ ಆ ರೀತಿ ಆಗಿದೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಚೈನಾದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ಈ ರಾಜ್ಯದಲ್ಲಿ ರೇಷ್ಮೆ ಕೃಷಿ ಸಂಪೂರ್ಣವಾಗಿ ನಾಶವಾಗುವುದಕ್ಕೆ ಕಾರಣ ಎಂದು ತಾವು ಹೇಳಬೇಕು. ಚೈನಾದಿಂದ ಸಾಕಷ್ಟು ರೇಷ್ಮೆ ತರಿಸಿಕೊಂಡು ರೇಷ್ಮೆ ಬೆಳೆಗಾರರ ಕುಟುಂಬಗಳು ಸಂಪೂರ್ಣವಾಗಿ ನಾಶವಾಗತಕ್ಕಂತಹ ಪ್ರಯತ್ನ ಕೇಂದ್ರ ಸರ್ಕಾರದಲ್ಲಿ ಆಗುತ್ತಿದೆ. ರೇಷ್ಮೆ ಆಮದು ನೀತಿಯಿಂದ ಸಫರ್ ಮಾಡುತ್ತಿರುವವರು ನಾವೂ ಕೂಡ ಇದ್ದೇವೆ.

ಅಧ್ಯಕ್ಷರು : ಚೈನಾದಿಂದ ರೇಷ್ಮೆ ಆಮದು ಏನು ಮಾಡಿಕೊಳ್ಳುತ್ತಿದ್ದೀರಿ, ಅದರಿಂದ ಬೆಲೆಗಳು ಕಡಿಮೆಯಾಗುವುದಕ್ಕೆ ಮುಖ್ಯವಾದ ಕಾರಣವಾಗಿದೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ನಾವೆಲ್ಲರೂ ಕೂಡ ಕೇಂದ್ರ ಸರ್ಕಾರದ ವಿರುದ್ಧ ದಾಳಿ ಮಾಡಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ತಾವು ತಾಳ್ಮೆಯಿಂದ ಕೇಳುವುದಾದರೆ ಹೇಳಬಹುದು. ಮಾನ್ಯ ನರಸಿಂಹರಾವ್‌ರವರು ಈ ದೇಶದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಮಾನ್ಯ ಪ್ರಣಬ್ ಮುಖರ್ಜಿಯವರು ಯೂನಿಯನ್ ಕಾಮರ್ಸ್ ಮಿನಿಸ್ಟರ್ ಆಗಿದ್ದರು. ಆ ಸಂದರ್ಭದಲ್ಲಿ ಇದ್ದಂತಹ ಈ ರಾಜ್ಯದ ಮುಖ್ಯ ಮಂತ್ರಿಗಳು ನಮ್ಮ ಒಂದು ಡೆಲಿಗೇಷನ್ ಫಾರಂ ಮಾಡಿ ಡೆಲ್ಲಿಗೆ ಕಳುಹಿಸಿಕೊಟ್ಟರು. ಆಗ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ವೈ. ಕೆ. ರಾಮಯ್ಯನವರೂ ಆ ಡೆಲಿಗೇಷನ್‌ನಲ್ಲಿದ್ದರು. ನಾನೂ ಇದ್ದೆ. ಆ ಸಂದರ್ಭದಲ್ಲಿ ಮಾನ್ಯ ಪ್ರಣಬ್ ಮುಖರ್ಜಿಯವರು, He said "you are holding brief for somebody, get out from here" ಎಂದು ಹೇಳಿದ್ದರು.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಏನು ಸಂಬಂಧ ಇದೆ? ಅವರು ಹೋಗಿ ಎಂದು ಹೇಳಿದ್ದಕ್ಕೂ ಈ ಪ್ರಶ್ನೆಗೂ ಸಂಬಂಧವಿಲ್ಲ.

(ಮುಂದಲ)

10.50. ಎ. ಎಂ

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಜಪೇಯಿಯವರ ನೇತೃತ್ವದ ಸರ್ಕಾರದಲ್ಲಿ ನಮ್ಮ ರಾಜ್ಯದವರೊಬ್ಬರು ಕೇಂದ್ರದಿಂದ ವಾಣಿಜ್ಯ ಸಚಿವರಾಗಿದ್ದಾಗ ಚೈನಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದಕ್ಕೆ ಅವರು ತೆಗೆದುಕೊಂಡ ನೀತಿಯ ಬಗ್ಗೆ ಮಾನ್ಯ ಸಿಂಧ್ಯಾರವರಿಗೆ ಗೊತ್ತಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಹಾಕಿರುವ ಪ್ರಶ್ನೆಗೆ ಸಂಬಂಧಪಡದ ವಿಚಾರವೇಕೆ?

ಶ್ರೀ ಎಸ್. ಎಸ್. ಪಾಟೀಲ್ : ಇದು ರೇಷ್ಮೆ ಬೆಳೆಯುತ್ತಿರತಕ್ಕಂಥ ರೈತರ ಪ್ರಶ್ನೆಯಾಗಿದೆ. ದಯವಿಟ್ಟು ಇದರಲ್ಲಿ ನಾವು ರಾಜಕೀಯ ಬೆರೆಸುವುದು ಬೇಡ. ಕೇಂದ್ರ ಸರ್ಕಾರದವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಗುದ್ದಾಡುವುದು ಬೇಡ. ಇವೊತ್ತು ರೇಷ್ಮೆ ಬೆಳೆಯುತ್ತಿರುವ ರೈತರಿಗೆ ಇದ್ದುದರಲ್ಲಿ ನಾವೇನು ಸಹಾಯ ಮಾಡಬಹುದು ಮತ್ತು ಸರ್ಕಾರ ಏನು ಸಹಾಯ ಮಾಡಬಹುದು ಎಂಬ ಬಗ್ಗೆ ಚರ್ಚೆ ಮಾಡುವುದು ಅವಶ್ಯಕತೆ ಇದೆ.

ಶ್ರೀ ಎಂ ಮಹದೇವ : ಅಂಥ ರೈತರಿಗೆ ಏನು ಸಹಾಯ ಮಾಡಬಹುದು ಎಂಬ ಬಗ್ಗೆಯೇ ನಾವು ಇಂಥಿಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ವಿವರವನ್ನು ಕೊಟ್ಟಿದ್ದೇವೆ. ಇನ್ನೂ ಹೆಚ್ಚು ನಾನೇನು ಕೊಡಬೇಕು ಹೇಳಿ.

ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ : ಸರ್ಕಾರ ಖರೀದಿ ಮಾಡುತ್ತಿರುವ ದರಕ್ಕಿಂತ ಖಾಸಗಿಯವರು ಹೆಚ್ಚಿನ ದರದಲ್ಲಿ ರೇಷ್ಮೆಯನ್ನು ಖರೀದಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆದರೆ ಬೆಳಗಾಂವ್ ಜಿಲ್ಲೆಯ ಗೋಕಾಕ್‌ನಲ್ಲಿ ಸರ್ಕಾರದ ದರಕ್ಕಿಂತ ಹೆಚ್ಚಿನ ದರದಲ್ಲಿ ರೇಷ್ಮೆಯನ್ನು ಖಾಸಗಿಯವರು ಖರೀದಿ ಮಾಡುತ್ತಿದ್ದಾರೆ. ಇದು ಗೊತ್ತಿದ್ದು ನಿಮ್ಮ ಇಲಾಖೆಯವರು ನಿಮಗೇ ತಪ್ಪು ಮಾಹಿತಿಯನ್ನು ಕೊಟ್ಟರೆ ನಾವೇನು ಮಾಡುವುದು. ನಿಮ್ಮ ಇಲಾಖೆಯವರು ಯಾರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಎಂಬ ಬ್ಗಗೆ ತಾವು ಗಮನಿಸಬೇಕು.

ಶ್ರೀ ಎಂ ಮಹದೇವ : ಹೆಚ್ಚಿನ ದರದಲ್ಲಿ ರೇಷ್ಮೆಯನ್ನು ಖಾಸಗಿಯವರು ಖರೀದಿ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ತಾವೇನಾದರೂ ವಿವರ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ.

ದೊಡ್ಡಬಳ್ಳಾಪುರದಲ್ಲಿ ನಿವೇಶನ ಹಂಚಿಕೆಯಲ್ಲಿ ಆಗಿರುವ ಅವ್ಯವಹಾರ

205 (1903) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ದೊಡ್ಡಬಳ್ಳಾಪುರದ ನಗರಸಭೆಯು ನಿವೇಶನಗಳನ್ನು ಹಂಚುವಾಗ ಲೋಪದೋಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?